## ದಿನಾಂಕ 6.9.2006ರಂದು ಜರುಗಿದ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಐದನೇ ಸಭೆಯ ನಡಾವಳಿಗಳು

ಸಭೆಗ ಹಾಜರಾದವರ ಪಟ್ಟಿಯನ್ನು ಅನುಬಂಧ 1 ರಲ್ಲಿ ನೀಡಲಾಗಿದೆ.

ಮಂಡಳಿ ಸದಸ್ಯ ಕಾರ್ಯದರ್ಶಿಯವರು ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಹಾಗೂ ಅಧ್ಯಕ್ಷರು ಕರ್ನಾಟಕ ಜೀವವೈವಿಧ್ಯ ಮಂಡಳಿ ಇವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿದರು ಹಾಗೂ ಹಾಜರಾದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು.

ಆರಂಭದಲ್ಲಿ ಮಾನ್ಯ ಸಚಿವರು ಕರ್ನಾಟಕ ರಾಜ್ಯವು ಜೀವವೈವಿಧ್ಯ ಮಂಡಳಿಯನ್ನು ರಚಿಸಿರುವ ಬಗ್ಗೆ ಹರ್ಷ ಸೂಚಿಸುತ್ತಾ ಈ ಮಂಡಳಿ ಕಾರ್ಯನಿರ್ವಹಿಸಲು ಸೂಕ್ತ ಅನುದಾನ ನೀಡದಿರುವುದರಿಂದ ಮಂಡಳಿಯು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಕಷ್ಟವಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆಂದು ತಿಳಿಸಿದರು. ಮಂಡಳಿಯ ಕಾರ್ಯಚಟುವಟಿಕೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಿಬ್ಬಂದಿ/ಆಡಳಿತ ವೆಚ್ಚ, ಮೂಲಭೂತ ಸೌಕರ್ಯಗಳು ಹಾಗೂ ಯೋಜನೆಗಳಿಗೆ ಅವಶ್ಯವಿರುವ ಅನುದಾನದ ಬಗ್ಗೆ ಒಂದು ವಿವರವಾದ ಪ್ರಸ್ತಾವನೆಯನ್ನು ಸದಸ್ಯ ಕಾರ್ಯದರ್ಶಿಯವರು ಕೂಡಲೇ ತಯಾರಿಸಿ ತಮಗೆ ಕಳುಹಿಸಬೇಕೆಂದು ಸೂಚಿಸಿದರು. ನಂತರ ಅದನ್ನು ಪರಿಶೀಲಿಸಿ ಮಾನ್ಯ ಮುಖ್ಯಮಂತ್ರಿಗಳನ್ನು ವೈಯುಕ್ತಿಕವಾಗಿ ಭೇಟಿ ಮಾಡಿ ಅನುದಾನದ ಅವಶ್ಯಕತೆಯ ಬಗ್ಗೆ ಮನಗಾಣಿಸಿ ಸೂಕ್ತ ಅನುದಾನ ಒದಗಿಸಿ ಕೊಡುವುದಾಗಿ ತಿಳಿಸಿದರು.

**ವಿಷಯ 1 : ದಿನಾಂಕ 21–11–2005ರಂದು ಜರುಗಿದ ಮಂಡಳಿಯ ನಾಲ್ಕನೇ ಸಭೆಯ ನಡವಳಿಗಳನ್ನು ಓದುವುದು ಮತ್ತು ದಾಖಲೆಗೊಳಿಸುವುದು.**

ದಿನಾಂಕ 21–11–2005ರಂದು ಜರುಗಿದ ಮಂಡಳಿಯ ನಾಲ್ಕನೇ ಸಭೆಯ ನಡವಳಿಗಳನ್ನು ಯಾವುದೇ ಬದಲಾವಣೆಗಳಿಲ್ಲದೆ ಓದಿ ದಾಖಲಿಸಲಾಯಿತು.

**ವಿಷಯ 2 : ಮಂಡಳಿಯ ನಾಲ್ಕನೇ ಸಭೆಯ ನಡವಳಿಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ಪರಿಶೀಲಿಸುವುದು.**

1. **ಕರ್ನಾಟಕ ಜೀವವೈವಿಧ್ಯ ನಿಯಮಗಳು, 2005ನ್ನು ಕಾನೂನುಬದ್ಧಗೊಳಿಸುವ ಬಗ್ಗೆ :**

ಕರ್ನಾಟಕ ಸರ್ಕಾರವು ಅಧಿಸೂಚನೆ ಸಂ:ಆಪಜೀ 151 ಇಎನ್‌ವಿ 2005 ದಿನಾಂಕ 3.5.2006ರಂದು ಕರ್ನಾಟಕ ಜೀವವೈವಿಧ್ಯ ನಿಯಮಗಳು, 2005ನ್ನು ಪ್ರಕಟಣೆಗೊಳಿಸಿದ್ದು, ಈ ಪ್ರಕಟಣೆಯ ದಿನಾಂಕ 29–6–2006ರ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಸದಸ್ಯ ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

ಈ ನಿಯಮಾವಳಿಗಳಲ್ಲಿ ನಿಯಮ 3ರಲ್ಲಿ ಅಧ್ಯಕ್ಷರ ಆಯ್ಕೆ ಮತ್ತು ನೇಮಕಾತಿ ವಿಧಾನವನ್ನು ಪರಿಶೀಲಿಸಿದ ಮಾನ್ಯ ಸಚಿವರು ಮಂಡಳಿಯ ಕಾರ್ಯಚಟುವಟಿಕೆಗಳಿಗೆ ಸೂಕ್ತ ಅನುದಾನ

ನೀಡಲಾಗದಿರುವ ಪರಿಸ್ಥಿತಿಯಲ್ಲಿ ಈ ಮಂಡಳಿಗೆ ಪ್ರತ್ಯೇಕ ಅಧ್ಯಕ್ಷರನ್ನು ನೇಮಿಸಿದಲ್ಲಿ ಹೆಚ್ಚಿನ ಹೊರೆ ಬೀಳುವುದರಿಂದ ಇದನ್ನು ತಪ್ಪಿಸಲು ಈ ಮೊದಲಿನಂತೆ ಮಂಡಳಿಗೆ ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರನ್ನೇ ಅಧ್ಯಕ್ಷರನ್ನಾಗಿ ಹಾಗೂ ಪ್ರಧಾನ ಕಾರ್ಯದರ್ಶಿ. ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇವರನ್ನು ಉಪಾಧ್ಯಕ್ಷರನ್ನಾಗಿ ನೇಮಿಸುವುದು ಸೂಕ್ತವೆಂದು ಅಭಿಪ್ರಾಯ ನೀಡಿದರು. ಸಭೆಯು ಮಾನ್ಯ ಸಚಿವರ ಅಭಿಪ್ರಾಯಕ್ಕೆ ಒಪ್ಪಿಗೆ ಸೂಚಿಸಿ ಈ ನಿಯಮಾವಳಿಗಳಿಗೆ ಸೂಕ್ತ ತಿದ್ದುಪಡಿ ಹೊರಡಿಸುವ ಬಗ್ಗೆ ಸರ್ಕಾರಕ್ಕೆ ವಿನಂತಿಸುವ ಕುರಿತು ಸರ್ವಾನುಮತದ ನಿರ್ಣಯ ಕೈಗೊಂಡಿತು.

ಕಾಯ್ದೆ ಪ್ರಕಾರ ಮಂಡಳಿಗೆ 5 ಜನ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ ಸದಸ್ಯ ಕಾರ್ಯದರ್ಶಿಯವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕೂಡಲೇ ಕಳುಹಿಸುವಂತೆ ತೀರ್ಮಾನಿಸಲಾಯಿತು.

2. **ಪ್ರಾಣಿಶಾಸ್ತ್ರ ಮತ್ತು ಸಸ್ಯಶಾಸ್ತ್ರ ವಿಷಯಗಳ ರೀಡರ್ / ಸಹಪ್ರಾಧ್ಯಪಕರ ಹುದ್ದೆಗಳನ್ನು ನಿಯೋಜನೆ ಮೇರೆಗೆ ಭರ್ತಿಗೊಳಸುವ ಬಗ್ಗೆ.**

ಡಾ. ಟಿ.ಸಿ. ತಾರಾನಾಥ್, ಇವರು ದಿನಾಂಕ 17.6.2006ರಂದು ಮಂಡಳಿಯ ಸಹ ಪ್ರಾಧ್ಯಾಪಕರು ಸಸ್ಯಶಾಸ್ತ್ರ ಹುದ್ದೆಗೆ ಹಾಜರಾಗಿರುವ ಬಗ್ಗೆ ಮತ್ತು ಡಾ. ಬಿ.ಬಿ. ಹೊಸಟ್ಟಿ ಇವರ ಸೇವೆ ಮಂಡಳಿಗೆ ನೀಡಲಾಗದೆಂದು ಕುವೆಂಪು ವಿಶ್ವವಿದ್ಯಾಲಯದ ಕುಲಸಚಿವರು ಪತ್ರ ಬರೆದಿರುವ ವಿಚಾರವನ್ನು ಸದಸ್ಯ ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತರುತ್ತಾ, ಈ ಹಿಂದೆ ಇದೇ ಹುದ್ದೆಗೆ ನಿಯೋಜನೆ ಮೇರೆಗೆ ಕೆಲಸ ನಿರ್ವಹಿಸಲು ಒಪ್ಪಿದ್ದ ಡಾ. ವಿ.ಎನ್. ನಾಯಕ್ ಕರ್ನಾಟಕ ವಿಶ್ವವಿದ್ಯಾಲಯ ಇವರ ಸೇವೆಯನ್ನು ನೀಡುವಂತೆ ಸರ್ಕಾರಕ್ಕೆ ಪತ್ರ ಬರೆದಿರುವ ಬಗ್ಗೆ ತಿಳಿಸಿದರು. ಸದಸ್ಯ ಕಾರ್ಯದರ್ಶಿಯವರ ಪೂರ್ವಭಾವಿ ಕ್ರಮವನ್ನು ಸಭೆಯು ಅನುಮೋದಿಸುತ್ತಾ ಡಾ. ವಿ. ಎನ್.ನಾಯಕ್‌ರವರ ನಿಯೋಜನೆ ಬಗ್ಗೆ ಸಂಬಂದಿಸಿದ ವಿಶ್ವವಿದ್ಯಾಲಯದೊಂದಿಗೆ ಸಂಪರ್ಕಿಸಿ ಅವರ ಸೇವೆಯನ್ನು ಕೂಡಲೇ ಪಡೆಯುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

3. **ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ತರಬೇತಿ ಹಾಗೂ ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿ ಬಗೆಗಿನ ಯೋಜನೆ ಕುರಿತು.**

ಕಳೆದ ಸಭೆಯಲ್ಲಿ ನಿರ್ಣಯಿಸಿದಂತೆ ಮೇಲಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಲವಾರು ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿದ ಬಗ್ಗೆ ಸದಸ್ಯ ಕಾರ್ಯದರ್ಶಿಯವರು ಸಭೆಗೆ ವಿವರಗಳನ್ನು ನೀಡಿದರು. ರೂಪಾಯಿ 55ಲಕ್ಷ ಅನುದಾನ ನೀಡುವ ಬಗ್ಗೆ ಸಲ್ಲಿಸಲಾದ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಸಂಬಂದಿಸಿದ ಇಲಾಖೆಯಡಿ ಉಳಿಯಬಹುದಾದ ಅನುದಾನದಲ್ಲಿ ಪೂರೈಸಿಕೊಳ್ಳುವ ಬಗ್ಗೆ ಬರೆದಿರುವುದಾಗಿ ಸಭೆಗೆ ತಿಳಿಸಲಾಯಿತು. ಮಂಡಳಿಯ ಕಾರ್ಯಚಟುವಟಿಗಳ ಅನುಷ್ಠಾನ, ಮೂಲಭೂತ ಸೌಕರ್ಯಗಳಿಗೆ ಬೇಕಾಗುವ ಅನುದಾನ ಮತ್ತು ಸಿಬ್ಬಂದಿ ಹಾಗೂ ಕಛೇರಿ ವೆಚ್ಚಗಳಿಗೆ ತಗಲಬಹುದಾದ ವಿವರವಾದ ಮಾಹಿತಿಗಳೊಂದಿಗೆ ಪ್ರಸ್ತಾವನೆಯೊಂದನ್ನು ತಯಾರಿಸಿ ತಮಗೆ ಸಲ್ಲಿಸಿದಲ್ಲಿ ಮಾನ್ಯ ಮುಖ್ಯಮಂತ್ರಿ ಹಾಗೂ ಆರ್ಥಿಕ ಸಚಿವರನ್ನು ಖುದ್ದಾಗಿ ಭೇಟಿ ಮಾಡಿ ಅನುದಾನ ದೊರಕಿಸಿಕೊಡುವ ಬಗ್ಗೆ ಪ್ರಯತ್ನಿಸುವುದಾಗಿ ತಿಳಿಸಿದರು.

4. **ಜೀವವೈವಿಧ್ಯ ಸಂಬಂಧದ ಯೋಜನೆಗಳನ್ನು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಚೆನ್ನೈಗೆ ಶಿಫಾರಸ್ಸು ಮಾಡುವ ಬಗ್ಗೆ.**

ಮಂಡಳಿಯು ವಿವಿಧ ವಿಶ್ವವಿದ್ಯಾಲಯಗಳಿಂದ ಸ್ವೀಕರಿಸಿದ ಜೀವವೈವಿಧ್ಯಕ್ಕೆ ಸಂಬಂಧಿಸಿದ 5 ಯೋಜನೆಗಳನ್ನು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಚೆನ್ನೈಗೆ ಶಿಫಾರಸ್ಸು ಮಾಡಿರುವ ಬಗ್ಗೆ ಹಾಗೂ ಮಂಡಳಿಯಿಂದ 5 ಯೋಜನೆಗಳನ್ನು ತಯಾರಿಸಿ ಭಾರತ ಸರ್ಕಾರಕ್ಕೆ ಅನುದಾನಕ್ಕಾಗಿ ಸಲ್ಲಿಸಿರುವ ಬಗ್ಗೆ ಸದಸ್ಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದುದನ್ನು ಅನುಮೋದಿಸಲಾಯಿತು.

ಜೀವವೈವಿಧ್ಯ ಸಂಬಂಧಿಸಿದ ಯೋಜನೆಗಳನ್ನು ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ತಯಾರಿಸಿ ವಿವಿಧ ದಾನಿ ಸಂಸ್ಥೆಗಳಿಗೆ ಕಳುಹಿಸುವಂತೆ ನಿರ್ಣಯಿಸಲಾಯಿತು.

5. **ಡಾ. ಸತ್ಯನಾರಾಯಣ ಭಟ್, ಪ್ರಾಧ್ಯಾಪಕರು ಇವರ ಸೇವೆಯನ್ನು ಮಂಡಳಿಯಲ್ಲಿ ಮುಂದುವರಿಸುವ ಬಗ್ಗೆ**

ಡಾ. ಸತ್ಯನಾರಾಯಣ ಭಟ್, ಪ್ರಾಧ್ಯಾಪಕರು ಇವರ ಸೇವೆಯನ್ನು ಮಂಡಳಿಯಲ್ಲಿ ಮುಂದಿನ ಎರಡು ವರ್ಷಗಳವರೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ ಅಕುಕ 511 ಪಿಟಿಡಿ 2005 ದಿನಾಂಕ 24–3–2006ರಲ್ಲಿ ಮುಂದುವರೆಸಿರುವುದನ್ನು ಸಭೆಯು ಗಮನಿಸಿತು.

**ವಿಷಯ 3 : ಮಂಡಳಿಯ ಪರಿಣಿತ ಸಮಿತಿಗಳ ಪ್ರಥಮ ಸಭೆಯ ನಡವಳಿಗಳ ಬಗ್ಗೆ ಸೂಕ್ತ ನಿರ್ಣಯಗಳನ್ನು ಕೈಗೊಳ್ಳುವುದು.**

ಮಂಡಳಿಯು ರಚಿಸಿದ ನಾಲ್ಕು ಪರಿಣಿತ ಸಮಿತಿಗಳು ಒಂದೊಂದು ಸಭೆಯನ್ನು ಕರೆದು ಕೈಗೊಂಡ ನಿರ್ಣಯಗಳ ಪಟ್ಟಿಯನ್ನು ಸಭೆಗೆ ಮಂಡಿಸಲಾಯಿತು. ಈ ನಿರ್ಣಯಗಳ ಬಗ್ಗೆ ಸದಸ್ಯ ಕಾರ್ಯದರ್ಶಿಯವರು ಪರಿಶೀಲಿಸಿ ಸೂಕ್ತ ಕಾರ್ಯಯೋಜನೆಗಳನ್ನು ತಯಾರಿಸುವಂತೆ ತೀರ್ಮಾನಿಸಲಾಯಿತು.

**ವಿಷಯ 4 : ಕರ್ನಾಟಕ ಕರಾವಳಿಯ ಜೀವವೈವಿಧ್ಯ ಮಾಹಿತಿ ಮತ್ತು ನಿರ್ವಹಣಾ ಯೋಜನೆ ಅನುಷ್ಠಾನದ ಪರಿಶೀಲನೆ**

ಕರ್ನಾಟಕ ಕರಾವಳಿಯ ಜೀವವೈವಿಧ್ಯ ಮಾಹಿತಿ ಮತ್ತು ನಿರ್ವಹಣಾ ಯೋಜನೆಗೆ ಕೆಯುಐಡಿಎಫ್‌ಸಿ ಸಂಸ್ಥೆಯು ರೂ. 94.50 ಲಕ್ಷ ಮಂಜೂರು ಮಾಡಿದ್ದು, ಆಗಸ್ಟ್ 2005ರಿಂದ ಚಟುವಟಿಗಳನ್ನು ಪ್ರಾರಂಭಿಸಲಾಗಿರುತ್ತದೆ. ಶ್ರೀ ಗಂಗಾಧರ ವಿ. ಮಡ್ಡಿಕೇರಿ, ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ) ಇವರು ಆರಂಭದಿಂದಲೂ ಯೋಜನೆಯ ಅನುಷ್ಠಾನ ನೋಡಿಕೊಳ್ಳುತ್ತಿರುವುದರಿಂದ ಅವರೇ ಯೋಜನೆಯ ವಿವರ. ಕಾರ್ಯಚಟುವಟಿಕೆ ಹಾಗೂ ಇದುವರೆಗಿನ ಪ್ರಗತಿಯ ವಿವರಗಳನ್ನು ಸಭೆಗೆ ಮಂಡಿಸಲು ಸದಸ್ಯ ಕಾರ್ಯದರ್ಶಿ ಅನುಮತಿ ನೀಡುವಂತೆ ಅಧ್ಯಕ್ಷರನ್ನು ಕೋರಿದರು. ಅವರ ಅನುಮತಿ ಮೇರೆಗೆ ಶ್ರೀ ಗಂಗಾಧರ ವಿ. ಮಡ್ಡಿಕೇರಿ, ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ) ಇವರು ಯೋಜನೆಯ ರೂಪುರೇಷೆ ಹಾಗೂ ಅನುಷ್ಠಾನಗೊಳಿಸುತ್ತಿರುವ ವಿವಿಧ ಸಂಸ್ಥೆಗಳು ಇದುವರೆಗೆ ಕೈಗೊಂಡ ಕಾರ್ಯಕ್ರಮಗಳ ಪ್ರಗತಿಯನ್ನು ಮತ್ತು ಜೂನ್ 2006ರ ಅಂತ್ಯದವರೆಗೆ ವಿವಿಧ ಸಂಸ್ಥೆಗಳಿಂದ

ಒಟ್ಟು ರೂ. 22.80 ಲಕ್ಷ ವೆಚ್ಚವಾಗಿರುವ ಬಗ್ಗೆ ಸಭೆಗೆ ವಿವರಿಸಿದರು, ಯೋಜನೆಯಡಿ ಅಧ್ಯಯನ ಮಾಡುವ ವಿವಿಧ ಪ್ರಭೇದಗಳ ಬಗ್ಗೆ ಮಾನ್ಯ ಸಚಿವರು ಪ್ರಶ್ನಿಸಲಾಗಿ ಕರಾವಳಿಯ ಮೂರು ಜಿಲ್ಲೆಗಳಲ್ಲಿಯ ಸಮುದ್ರ, ತೀರ, ದ್ವೀಪ, ಅಳಿವೆಗಳಲ್ಲಿಯ ಆರ್ಥಿಕ ಹಾಗೂ ಆರ್ಥಿಕವಲ್ಲದ ಆದರೆ ಎಲ್ಲಾ ಜೀವವೈವಿಧ್ಯತೆಯನ್ನು ಅಧ್ಯಯನ ಹಾಗೂ ದಾಖಲೆಗಳಿಂದ ಕ್ರೋಢಿಕರಿಸಿ ಜಿ.ಐ.ಎಸ್ ನಕಾಶೆಯಡಿ ದಾಖಲಿಸಲಾಗುವುದೆಂದು ವಿವರಣೆ ನೀಡಿದರು. ಈ ಯೋಜನೆಯನ್ನು ಆದಷ್ಟು ಕೂಡಲೇ ಪೂರ್ಣಗೊಳಿಸಲು ಹಾಗೂ ಇತರ ಯೋಜನೆಗಳನ್ನು ರೂಪಿಸಿ ಸೂಕ್ತ ಅನುದಾನ ಮಂಜೂರಾತಿಗೆ ಸದರಿ ಸಂಸ್ಥೆಗೆ ಸಲ್ಲಿಸುವ ಬಗ್ಗೆ ಕ್ರಮಕೈಗೊಳ್ಳುವಂತೆ ನಿರ್ಣಯಿಸಲಾಯಿತು.

**ವಿಷಯ 5 : ಕುವೆಂಪು ಸ್ಮಾರಕ ಜೈವಿಕವೈವಿಧ್ಯ ಯೋಜನೆ ಅನುಷ್ಠಾನದ ಪರಿಶೀಲನೆ :**

ಈ ಯೋಜನೆಗೆ ಕರ್ನಾಟಕ ಸರ್ಕಾರವು ರೂ. 1.00 ಕೋಟಿ ಅನುದಾನ ನೀಡಿರುವ ಬಗ್ಗೆ ಹಾಗೂ ಇದುವರೆಗೆ ಮೋಜಣಿ ಮತ್ತು ಗಡಿ ನಿರ್ಧಾರಣೆ ಹಾಗೂ ಭದ್ರಗೊಳಿಸುವಿಕೆ, ಕುವೆಂಪು ಸಂದೇಶವನ ನಿರ್ಮಾಣ, ಚಿಪ್ಪಲಗುಡ್ಡ ಮತ್ಸ್ಯಧಾಮ ಅಭಿವೃದ್ಧಿ ಹಾಗೂ 8 ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮೂಲಕ ಜನತಾ ಜೀವವೈವಿಧ್ಯ ದಾಖಲಾತಿ ಕಾರ್ಯಗಳನ್ನು ಹಮ್ಮಿಕೊಂಡಿದ್ದು, ಇದುವರೆಗೆ ರೂ. 35.20 ಲಕ್ಷ ವೆಚ್ಚವಾಗಿದೆ ಎಂದು ಡಾ. ಸತ್ಯನಾರಾಯಣ ಭಟ್ ಸಭೆಗೆ ವಿವರಿಸಿದರು.

ವಿಧಾನ ಸಭೆಯಲ್ಲಿ ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಕುಪ್ಪಳ್ಳಿಗೆ ಭೇಟಿ ನೀಡಿ ಸ್ಥಳೀಯ ಶಾಸಕರು ಜನತೆ ಹಾಗೂ ಅರಣ್ಯಾಧಿಕಾರಿಗಳೊಂದಿಗೆ ಚರ್ಚಿಸುವ ಭರವಸೆಯನ್ನು ನೀಡಿರುವ ಬಗ್ಗೆ ಸದಸ್ಯ ಕಾರ್ಯದರ್ಶಿಗಳು ಮಾನ್ಯ ಸಚಿವರ ಗಮನಕ್ಕೆ ತಂದರು. ಮಾನ್ಯ ಸಚಿವರು ಭರವಸೆ ನೀಡಿದ ಮೇರೆಗೆ ಸದ್ಯದಲ್ಲಿಯೇ ಕುಪ್ಪಳ್ಳಿಗೆ ಭೇಟಿ ನೀಡುವುದಾಗಿ ತಿಳಿಸಿದರು. ಆದರೆ ಈ ಯೋಜನೆಯಡಿ ಉಳಿದಿರುವ ಅನುದಾನದಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವಂತೆ ಮಂಡಳಿಯ ಸದಸ್ಯ ಕಾರ್ಯದರ್ಶಿಯವರಿಗೆ ನಿರ್ದೇಶಿಸಿದರು.

**ವಿಷಯ 6 : ಜೀವವೈವಿಧ್ಯ ಸಮಿತಿಗಳ ರಚನೆ ಬಗ್ಗೆ ಪ್ರಗತಿ ಪರಿಶೀಲನೆ :**

ಮಂಡಳಿಯು ಜೂನ್ 2006ರ ಅಂತ್ಯದವರೆಗೆ ರಾಜ್ಯದ 10 ಜಿಲ್ಲೆಗಳಲ್ಲಿ 527 ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಿರುವ ಬಗ್ಗೆ ಸಭೆಯು ಅಭಿನಂದಿಸಿತು. ಮಾನ್ಯ ಸಚಿವರು ಜೀವವೈವಿಧ್ಯದ ಬಗ್ಗೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಪ್ರಸರಿಸುವ ಬಗ್ಗೆ ಹಾಗೂ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸುವುದಲ್ಲದೆ ಅವುಗಳು ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ ತಿಳುವಳಿಕೆ ತರಬೇತಿಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಿದರು. ಸದಸ್ಯ ಕಾರ್ಯದರ್ಶಿಯವರು ಈ ವರ್ಷ ಕೆಯುಐಡಿಎಫ್‌ಸಿ, ಕುವೆಂಪು ಸ್ಮಾರಕ ಜೀವವೈವಿಧ್ಯ ಯೋಜನೆ ಹಾಗೂ ರಾಜ್ಯ ಸರ್ಕಾರದ 2006–07ನೇ ಸಾಲಿನಲ್ಲಿ ನೀಡಲಾದ ಅನುದಾನದಡಿ ಕನಿಷ್ಠ 52 ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮೂಲಕ ಪೂರ್ಣಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು.

ಕಾರ್ಯದರ್ಶಿ, ಪರಿಸರ ಮತ್ತು ಜೀವಿಶಾಸ್ತ್ರ ಇವರು ಗ್ರಾಮ ಪಂಚಾಯತಿಗಳಲ್ಲಿ ಹಲವಾರು ಸಮಿತಿಗಳನ್ನು ರಚಿಸಿದ್ದು ಅನುದಾನ ಇರುವವರೆಗೆ ಮಾತ್ರ ಈ ಸಮಿತಿಗಳು ಕಾರ್ಯಾಚರಣೆ ಮಾಡುವ ಪ್ರವೃತ್ತಿಯನ್ನು

ಗಮನಿಸಿರುವುದರಿಂದ ರಾಜ್ಯದಲ್ಲಿ ಸ್ಥಾಪಿಸುವ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಸೂಕ್ತ ಅನುದಾನ ಒದಗಿಸುವುದು ಅತೀ ಅವಶ್ಯವೆಂದು ಅಭಿಪ್ರಾಯಪಟ್ಟರು.

ಮಾನ್ಯ ಸಚಿವರು ಈ ಎಲ್ಲಾ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಸರ್ಕಾರದಿಂದಲೇ ಅನುದಾನ ಒದಗಿಸುವ ಬಗ್ಗೆ ಮುಂದಿನ ಆಯವ್ಯಯದಲ್ಲಿ ಈ ಬಗ್ಗೆ ಅಡಕಗೊಳಿಸಲು ಸೂಕ್ತ ಪ್ರಸ್ತಾವನೆಯನ್ನು ಕೂಡಲೇ ತಯಾರಿಸಿ ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಸದಸ್ಯ ಕಾರ್ಯದರ್ಶಿಗೆ ಸೂಚಿಸಿದರು.

**ವಿಷಯ 7 : ಶ್ರೀ ಗಂಗಾಧರ ವಿ. ಮಡ್ಡಿಕೇರಿ, ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ) ಇವರ ಸೇವೆಯನ್ನು ಮಂಡಳಿಯಲ್ಲಿ ಮುಂದುವರೆಸುವ ಬಗ್ಗೆ :**

ಶ್ರೀ ಗಂಗಾಧರ ವಿ. ಮಡ್ಡಿಕೇರಿ, ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ) ಇವರ ನಿಯೋಜನಾ ಅವಧಿ ದಿನಾಂಕ 13.8.2006ರಂದು ಕೊನೆಗೊಂಡಿದ್ದು, ಅವರು ಕರ್ನಾಟಕ ಕರಾವಳಿಯ ಜೀವವೈವಿಧ್ಯ ಮಾಹಿತಿ ಹಾಗೂ ನಿರ್ವಹಣಾ ಯೋಜನೆಯನ್ನು ಕರಾವಳಿಯ ಮೂರು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವುದರಿಂದ ಅವರ ಸೇವೆ ಮಂಡಳಿಗೆ ಅವಶ್ಯವಿರುವುದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು. ಸಭೆಯು ಅವರ ಸೇವೆಯನ್ನು ಮಂಡಳಿಯಲ್ಲಿ ಇನ್ನೂ 2 ವರ್ಷಗಳ ಅವಧಿಗೆ ಮುಂದುವರೆಸಲು ಸರ್ವಾನುಮತದ ನಿರ್ಣಯಕೈಗೊಂಡಿತು. ಈ ಬಗ್ಗೆ ಸರ್ಕಾರಕ್ಕೆ ಸೂಕ್ತ ಪ್ರಸ್ಥಾವನೆಯನ್ನು ನೀಡಲು ಸೂಚಿಸಿತು.

**ವಿಷಯ 8 : ಮಂಡಳಿಯ ಸದಸ್ಯ ಕಾರ್ಯದರ್ಶಿಯವರಿಗೆ ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರಗಳನ್ನು ನೀಡುವ ಹಾಗೂ ಕೆಲವು ಅಧಿಕಾರಗಳನ್ನು ಮಂಡಳಿಯ ಓರ್ವ ಕಾರ್ಯನಿರ್ವಹಣಾಧಿಕಾರಿಗೆ ವಹಿಸಿಕೊಡುವ ಬಗ್ಗೆ.**

ಸಭೆಯು ಈ ಬಗ್ಗೆ ವಿವರವಾಗಿ ಪರಿಶೀಲಿಸಿ ಅನುಬಂಧ II ರಲ್ಲಿ ನೀಡಲಾದ ಮತ್ತು ಸರ್ಕಾರದ ಇಲಾಖಾ ಮುಖ್ಯಸ್ಥರಿಗೆ ಇರುವ ಎಲ್ಲಾ ಆರ್ಥಿಕ ಹಾಗೂ ಆಡಳಿತಾತ್ಮಕ ಆಧಿಕಾರಗಳನ್ನು ಮಂಡಳಿಯ ಸದಸ್ಯ ಕಾರ್ಯದರ್ಶಿಯವರಿಗೆ ನೀಡಲು ಸರ್ವಾನುಮತದ ನಿರ್ಣಯ ಕೈಗೊಂಡಿತು.

ಅಲ್ಲದೆ ಸದಸ್ಯ ಕಾರ್ಯದರ್ಶಿಯವರು ಅನುಮೋದನೆ / ಮಂಜೂರಾತಿ ನೀಡಿದ ಓಚರ್ ಹಾಗೂ ಚೆಕ್ಕುಗಳಿಗೆ ಸಹಿಮಾಡುವ ಅಧಿಕಾರವನ್ನು ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಓರ್ವ ಕಾರ್ಯನಿರ್ವಹಣಾಧಿಕಾರಿ / ಆಡಳಿತಾಧಿಕಾರಿಗೆ ವಹಿಸಿಕೊಡುವ ಬಗ್ಗೆಯೂ ಅನುಮೋದನೆ ನೀಡಿತು.

**ವಿಷಯ 9 : ಮಂಡಳಿಯ ಅಧ್ಯಕ್ಷರು ಹಾಗೂ ಅಧಿಕಾರಿಗಳಿಗೆ ಪ್ರವಾಸ ಭತ್ಯೆ ಹಾಗೂ ದಿನಭತ್ಯೆಗಳನ್ನು ನೀಡುವ ಬಗ್ಗೆ**

ಮಂಡಳಿಯ ಅಧಿಕಾರಿಗಳು ಪ್ರವಾಸ ಕೈಗೊಂಡಾಗ ಅವರಿಗೆ ಸರ್ಕಾರದ ಪ್ರವಾಸಿ ಮಂದಿರ / ಅತಿಥಿಗೃಹಗಳಲ್ಲಿ ವಾಸ್ತವ್ಯಕ್ಕೆ ರೂಮುಗಳು ದೊರೆಯದೆ ತೊಂದರೆ ಅನುಭವಿಸುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸಭೆಯು ಚರ್ಚಿಸಿ ಅಂತಹ ಸಂದರ್ಭಗಳಲ್ಲಿ ಹೋಟೆಲುಗಳಲ್ಲಿ ತಂಗಿದ್ದ ಕುರಿತು ಸೂಕ್ತ ರಶೀದಿಗಳನ್ನು ನೀಡಿದಲ್ಲಿ ಮರುಪಾವತಿಸಬಹುದೆಂದು ನಿರ್ಣಯಿಸಿತು.

**ವಿಷಯ 10: ಮಂಡಳಿಯ ಸದಸ್ಯ ಕಾರ್ಯದರ್ಶಿಯವರಿಗೆ ಕಾರನ್ನು ಖರೀದಿಸುವ ಬಗ್ಗೆ :**

ಮಂಡಳಿಯ ಸದಸ್ಯ ಕಾರ್ಯದರ್ಶಿಯವರಿಗೆ ಒಂದು ಕಾರನ್ನು ಖರೀದಿಸಲು ಸಭೆಯು ಒಮ್ಮತದ ನಿರ್ಣಯ ಕೈಗೊಂಡಿತು.

**ವಿಷಯ 11: ಅಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಲಾದ ಇತರ ವಿಷಯಗಳು.**

1. **ಕಾರ್ಕಳದಲ್ಲಿ ಮಂಡಳಿಯ ಉಪಕಛೇರಿಯೊಂದನ್ನು ಪ್ರಾರಂಭಿಸುವ ಬಗ್ಗೆ :**

ಪಶ್ಚಿಮ ಘಟ್ಟಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಅತ್ಯಂತ ಸೂಕ್ಷ್ಮ ಹಾಗೂ ವಿಶಿಷ್ಟ ಜೀವವೈವಿಧ್ಯ ತಾಣವೆಂದು ಗುರುತಿಸಿರುವುದರಿಂದ ಕರ್ನಾಟಕ ರಾಜ್ಯದಲ್ಲಿರುವ ಪ್ರದೇಶದ ಜೀವವೈವಿಧ್ಯದ ದಾಖಲಾತಿ ಮತ್ತು ಸಂರಕ್ಷಣೆ ಬಗ್ಗೆ ಹೆಚ್ಚು ಒತ್ತು ನೀಡಬೇಕಾದ್ದು ಅವಶ್ಯವಾಗಿರುವುದರಿಂದ ಕಾರ್ಕಳದಲ್ಲಿ ಮಂಡಳಿಯ ಉಪಕಛೇರಿಯೊಂದನ್ನು ಪ್ರಾರಂಭಿಸಬೇಕೆಂದು ಡಾ.ವಿ.ಎಸ್. ಆಚಾರ್ಯ, ಮಾನ್ಯ ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ ಇವರು ದಿನಾಂಕ 14.5.2006ರಂದು ಕಾರ್ಕಳದ ಸಭೆಯೊಂದರಲ್ಲಿ ಸಲಹೆ ಮಾಡಿರುವ ಕುರಿತು ಸಭೆಯ ಗಮನಕ್ಕೆ ತರಲಾಯಿತು. ಸಭೆಯು ಅವರ ಕಾಳಜಿಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಕಾರ್ಕಳದಲ್ಲಿ ಉಪಕಛೇರಿಯೊಂದನ್ನು ಸ್ಥಾಪಿಸಲು ತಗಲುಬಹುದಾದ ವೆಚ್ಚದ ಬಗ್ಗೆ ಒಂದು ಪ್ರಸ್ತಾವನೆಯನ್ನು ಕೂಡಲೇ ತಯಾರಿಸಿ ಸರ್ಕಾರಕ್ಕೆ ಕಳುಹಿಸುವಂತೆ ನಿರ್ಣಯಿಸಲಾಯಿತು.

2. **ನಲ್ಲೂರು ಗ್ರಾಮದ ಹುಣಸೇತೋಪನ್ನು ಜೀವವೈವಿಧ್ಯ ಪಾರಂಪರಿಕ ತಾಣವಾಗಿ ಘೋಷಿಸುವ ಬಗ್ಗೆ**

ದೊಡ್ಡಬಳ್ಳಾಪುರ ತಾಲ್ಲೂಕಿನ ನಲ್ಲೂರು ಗ್ರಾಮದಲ್ಲಿ ಹಲವಾರು ಶತಮಾನಗಳ ಹಳೆಯ ಹುಣಸೇತೋಪು ಅತಿ ವಿಶಿಷ್ಠವಾಗಿರುವ ಬಗ್ಗೆ ಹಾಗೂ ಅಲ್ಲಿರುವ ಇತರ ಜೀವವೈವಿಧ್ಯ ಸಂಪತ್ತಿನ ಬಗ್ಗೆ ಸಭೆಗೆ ವಿವರವಾಗಿ ತಿಳಿಸಲಾಗಿ ಈ ತೋಪನ್ನು ಜೀವವೈವಿಧ್ಯ ಕಾಯಿದೆ 2002, ಪ್ರಕರಣ 37ರಡಿ ಜೀವವೈವಿಧ್ಯ ಪಾರಂಪರಿಕ ತಾಣವಾಗಿ ರಾಜ್ಯ ಸರ್ಕಾರವು ಘೋಷಿಸಲು ಶಿಪಾರಸ್ಸು ಮಾಡಲು ನಿರ್ಣಯಿಸಿತು.

3. **ರಾಜ್ಯದ ಕೈಗಾರಿಕೆಗಳು ಬಳಸಿಕೊಳ್ಳುತ್ತಿರುವ ಜೈವಿಕ ಸಂಪನ್ಮೂಲಗಳ ಮೇಲೆ ಶುಲ್ಕ/ಸೆಸ್ ವಿಧಿಸುವ ಬಗ್ಗೆ**

ಕರ್ನಾಟಕ ರಾಜ್ಯದಲ್ಲಿ ಸುಮಾರು 235 ನೊಂದಾಯಿತ / ಪರವಾನಿಗೆ ಹೊಂದಿದೆ ಆಯುರ್ವೇದ ಹಾಗೂ ನೈಸರ್ಗಿಕ ಉತ್ಪನ್ನಗಳ ಕಾರ್ಖಾನೆಗಳಿದ್ದು ಅವುಗಳಲ್ಲಿ ಸುಮಾರು 100 ಭಾರಿ ಮತ್ತು ಮಾಧ್ಯಮ ಕೈಗಾರಿಗಳಿರುತ್ತವೆ. ಇವುಗಳು ಭಾರತದಲ್ಲಿ ಲಭ್ಯವಿರುವ ಸುಮಾರು 900 ಹಾಗೂ ರಾಜ್ಯಕ್ಕೆ ಸೀಮಿತವಾಗಿರುವ ಸುಮಾರು 200 ಔಷಧೀಯ ಗಿಡಗಳನ್ನು ಬಳಸುತ್ತಿರುವುದಾಗಿ ಅಧ್ಯಯನಗಳಿಂದ ತಿಳಿದು ಬಂದಿರುವುದಾಗಿ ಮತ್ತು ಈ ಕಾರ್ಖಾನೆಗಳಿಗೆ ಪರವಾನಿಗೆಯನ್ನು ನಿರ್ದೇಶಕರು, ಭಾರತೀಯ ವೈದ್ಯಪದ್ದತಿ ಹಾಗೂ ಹೋಮಿಯೋಪತಿ ಇಲಾಖೆ ನೀಡುತ್ತಿರುವುದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು. ಈ ಕಾರ್ಖಾನೆಗಳಿಗೆ ಪರವಾನಿಗೆ ನೀಡುವ ಸಂದರ್ಭದಲ್ಲಿ ಕರ್ನಾಟಕ ಜೀವವೈವಿಧ್ಯ ನಿಯಮಗಳು 2005, ನಿಯಮ 15ರಡಿ ನಮೂನೆ 1ರಂತೆ ಅರ್ಜಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಿದಲ್ಲಿ ಮಂಡಳಿಗೆ ಆದಾಯ ಮೂಲ ಆಗುವುದಲ್ಲದೆ ಔಷಧೀಯ ಗಿಡಗಳ ಸುಸ್ಥಿರ ಬಳಕೆಯನ್ನು

ನಿಯಂತ್ರಿಸಬಹುದಾಗಿದೆ. ಅರಣ್ಯ ಇಲಾಖೆ ಅರಣ್ಯ ಕಿರು ಉತ್ಪನ್ನಗಳನ್ನು ಹರಾಜು ಮಾಡುವ ಸಂದರ್ಭದಲ್ಲಿ ಹರಾಜಿನ ಮೊತ್ತದ ಮೇಲೆ ಪ್ರತಿಶತ 10 ರಿಂದ 15ರಷ್ಟು ಸೆಸ್ ವಿಧಿಸಬಹುದೆಂದು ಸಭೆಗೆ ತಿಳಿಸಿದರು.

ಸಭೆಯು ಈ ವಿಚಾರದಲ್ಲಿ ಸುದೀರ್ಘವಾಗಿ ಚರ್ಚಿಸಿ ಶುಲ್ಕ / ಸೆಸ್ ವಿಧಿಸುವ ಬಗ್ಗೆ ಮತ್ತು ಅನುಷ್ಠಾನಗೊಳಿಸುವ ವಿವರಗಳನ್ನೊಳಗೊಂಡ ಪ್ರಸ್ತಾವನೆಯೊಂದನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಿತು. ಈ ಬಗ್ಗೆ ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಕೂಡಲೇ ಕಾರ್ಯಪ್ರವೃತ್ತರಾಗಬೇಕೆಂದು ನಿರ್ಣಯಿಸಿತು.

**4. ಮಂಡಳಿಯ ಕಛೇರಿ ಹಾಗೂ ಅಧಿಕಾರಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ:**

ಮಾನ್ಯ ಸಚಿವರು ಮಂಡಳಿಯ ಕಛೇರಿಗೆ ಹಾಗೂ ಅಧಿಕಾರಗಿಗಳಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಅಂದರೆ ಉತ್ತಮ ಕಛೇರಿ, ವಾಹನ, ದೂರವಾಣಿ, ಸದಸ್ಯ ಕಾರ್ಯದರ್ಶಿಯವರ ನಿವಾಸಕ್ಕೆ ದೂರವಾಣಿ ಒದಗಿಸಬೇಕೆಂದು ನಿರ್ದೇಶಿಸಿದರು. ಇದಕ್ಕೆ ಸಭೆಯ ಒಪ್ಪಿಗೆಯ ನಿರ್ಣಯ ಅಂಗೀಕರಿಸಿತು.

T.S. ಹರೀಶ್ ಇವರನ್ನು ಗುತ್ತಿಗೆ ಆಧಾರದ ಮೇಲೆ P.C.-ಆಗಿ [illegible]

ಮಂಡಳಿಯ ಸದಸ್ಯ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ಸಭೆಯ ಕಾರ್ಯಕಲಾಪಗಳು ಮುಕ್ತಾಯವಾದವು.

( ಸಿ. ಚನ್ನಿಗಪ್ಪ )
**ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಹಾಗೂ ಅಧ್ಯಕ್ಷರು ಕರ್ನಾಟಕ ಜೀವವೈವಿಧ್ಯ ಮಂಡಳಿ**

ಸದಸ್ಯ ಕಾರ್ಯದರ್ಶಿ
ಕರ್ನಾಟಕ ಜೀವವೈವಿಧ್ಯ ಮಂಡಳಿ
ಬೆಂಗಳೂರು



7

# ಅನುಬಂಧ - I

## ದಿನಾಂಕ: 06/09/20065 ರ□ದು ಜರುಗಿದ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಐದನೆಯ ಸಭೆಗೆ ಹಾಜರಾದವರ ಪಟ್ಟಿ

1. ಶ್ರೀ. ಸಿ.ಚನ್ನಿಗಪ್ಪ
   ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು
   ಹಾಗೂ ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ, ಬೆಂಗಳೂರು

2. ಶ್ರೀ.ಅಭಿಜಿತ್ ದಾಸ್‌ಗುಪ್ತಾ, ಭಾ.ಆ.ಸೇ.,
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
   ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು.

3. ಶ್ರೀ ಎ.ರಾಮಸ್ವಾಮಿ, ಭಾ.ಆ.ಸೇ.,
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
   ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.

4. ಶ್ರೀ.ಸನಾವುಲ್ಲ, ಭಾ.ಆ.ಸೇ.,
   ಸರ್ಕಾರದ ಕಾರ್ಯದರ್ಶಿಗಳು (ಪರಿಸರ ಮತ್ತು ಜೀವಿಶಾಸ್ತ್ರ)
   ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು

5. ಡಾ|| ಪ್ರಕಾಶ್
   ನಿರ್ದೇಶಕರು
   ಭಾರತೀ□ ವೈದ್ಯ ಪದ್ಧತಿ ಮತ್ತು ಹೋಮಿ□ೋಪತಿ, ಬೆ□ಗಳೂರು.

6. ಶ್ರೀ ಎನ್.ಡಿ.ತಿವಾರಿ, ಭಾ.ಅ.ಸೇ.,
   ಸದಸ್ಯ ಕಾರ್ಯದರ್ಶಿ,
   ಕರ್ನಾಟಕ ಜೀವವೈವಿಧ್ಯ ಮಂಡಳಿ, ಬೆಂಗಳೂರು.

| ಅನುಬಂಧ-II | | |
|---|---|---|
| **DELEGATION OF POWERS SANCTIONED TO MEMBER SECRETARY OF KARNATAKA BIODIVERSITY BOARD, BANGALORE IN THE V MEETING HELD ON 06-09-2006** | | |
| **Sl.No** | **Description of Powers** | **Member Secretary** |
| **1** | To make in charge arrangements and sanction of charge allowance etc., | Full Powers |
| **2** | To sanction hospitality charges | Rs.1.00 lakh per annum |
| **3** | To sanction purchase of Computers, Office equipments and Audio visual equipments etc., | Full Powers |
| **4** | To declare stores as obsolute, surplus or unserviceable | Full Powers |
| **5** | To sanction major overhauls /repairs to Boards vehicle | Upto Rs.25,000 each time |
| **6** | To sanction payment of charges on items not included in the delegation of powers such as postage, freight chares, customs duty, miscellaneous office expenses etc., | Full Powers |
| **7** | Awarding rewards to the officers/staff/public | Rs,5000 each case |
| **8** | Refund of EMD/FSD etc., | Full Powers |
| **9** | Payment of contingency works or expenses met on tour for Boards work | Full Powers |